ಭೂ ಪರಿಮಿತಿಯಡಿಯಲ್ಲಿ ಹೆಚ್ಚುವರಿ ಭೂಮಿಯ ಹಂಚಿಕೆ

143 (1068) ಶ್ರೀ ಕೆ. ಸಿದ್ದಯ್ಯ (ಸಂತೇಮರಳ್ಳಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂಮಿತಿ ಕಾಯಿದೆಯಂತೆ ಸಾಗುವಳಿಗೆ ವಿತರಣೆ ಲಭ್ಯವಿರುವ ಒಟ್ಟು ಹೆಚ್ಚುವರಿ ಕ್ಷೇತ್ರ,

ಆ) ಭೂ ಮಂಜೂರಾತಿ ನಿಯಮದಂತೆ ಕಡಿಮೆ ಬೀಳುವ ಭೂಮಿಯನ್ನು ಭರಿಸಿಕೊಡಲು ಸರ್ಕಾರವು ಆಲೋಚಿಸಿದೆಯೇ,

ಇ) ಆ ಭೂಮಿಯಲ್ಲಿ ಭೂಮಿತಿ ಕಾಯಿದೆಯಂತೆ ಹೆಚ್ಚುವರಿ ಭೂಮಿಯನ್ನು ವಿತರಿಸಲು ಸರ್ಕಾರವು ಉದ್ದೇಶಿಸಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಇಲ್ಲಿಯವರೆಗೆ 2,74,112 ಎಕರೆಯನ್ನು ಹೆಚ್ಚುವರಿ ಎಂದು ಭೂನ್ಯಾಯ ಮಂಡಲಿಗಳು ಘೋಷಿಸಿವೆ.

ಆ) ಹೆಚ್ಚುವರಿ ಭೂಮಿಯನ್ನು ಭೂ ಸುಧಾರಣೆ ಕಾಯಿದೆಯಂತೆ ವಿತರಿಸುವುದರಿಂದ ಈ ಪ್ರಶ್ನೆ ಉದ್ಭವಿಸದು.

ಇ) ಮೇಲಿನ ಕಾರಣಗಳಿಂದಾಗಿ ಈ ಪ್ರಶ್ನೆ ಉದ್ಭವಿಸದು.

ಶ್ರೀ ಕೆ. ಸಿದ್ದಯ್ಯ:- ತಾವು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಕಡಿಮೆ ಬರತಕ್ಕಂಥ ಜಮೀನನ್ನು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಪ್ರಕಾರ ಬಂದ ಸರ್ಪ್ಲಸ್ ಲ್ಯಾಂಡ್ ಇದೆಯಲ್ಲ ಅದರಲ್ಲಿಯಾದರೂ ಸರಿದೂಗಿಸಿ ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿರುತ್ತೀರಿ. ಇದರಲ್ಲಿ ಅನ್‌ಲಫ್ಯಿಲ್ಡ್ ಆಕ್ಯುಪೇಷನ್ಸ್ ಸಹ ಇದ್ದು ಗವರ್ನಮೆಂಟ್ ಲ್ಯಾಂಡ್ ಸಹ ಬೇಕಾದಷ್ಟು ಕಡಿಮೆ ಬರುತ್ತದೆ. ಈ ಕಡಿಮೆ ಬರತಕ್ಕಂಥ ಜಮೀನಿನಲ್ಲಿ ಲ್ಯಾಂಡ್ ರಿಫಾರ್ಮಸ್ ಆಕ್ಟ್ ನಿಂದ ಸರ್ಪ್ಲಸ್ ಲ್ಯಾಂಡ್ ಬರುತ್ತದೆಯಲ್ಲ ಅದನಲ್ಲಾದರೂ ಸರಿದೂಗಿಸಿ ಸೂಕ್ತ ನ್ಯಾಯ ಕೊಡುವುದಕ್ಕೆ ಸೂಕ್ತ ತಿದ್ದುಪಡಿ ಮಸೂದೆಯನ್ನು ತರುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಯಾವ ಅನ್ಯಾಯವೂ ಕೂಡ ಆಗಿಲ್ಲ. ಲ್ಯಾಂಡ್ ರಿಫಾರ್ಮಸ್ ಆಕ್ಟ್‌ನಲ್ಲಿ ಸುಮಾರು 1,14,694 ಎಕರೆ ಜಮೀನನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದೇವೆ. ಅದರಲ್ಲಿ 75,559 ಎಕರೆ ಎಸ್‌ಸಿ/ಎಸ್‌ಟಿಗೆ 60 ಪರ್ಸೆಂಟ್ ಕೊಟ್ಟಿವೆ ಕಾನೂನು ಪ್ರಕಾರ 50 ಪರ್ಸೆಂಟ್ ಕೊಡಬೇಕಾಗಿತ್ತು. ಆದರೆ 60 ಪರ್ಸೆಂಟ್ ವರೆಗೆ ಈಗಾಗಲೇ ಕೊಟ್ಟಿದ್ದೇವೆ. ಅವರು ಕೇಳತಕ್ಕಂಥದ್ದು ಲ್ಯಾಂಡ್ ಗ್ರಾಂಟ್ ರೂಲ್ಸ್‌ನಲ್ಲಿ ಕೊಡಬೇಕಾದಂಥ ಜಮೀನು ಇತ್ತು ಅದನ್ನು ರೆಗ್ಯುಲರೈಸ್ ಮಾಡುತ್ತಿದ್ದೀರಿ ಅದರಲ್ಲಿ 50 ಪರ್ಸೆಂಟ್ ಕೊರತೆ ಬೀಳುತ್ತದೆ, ಆ ಕೊರತೆಯನ್ನು ತುಂಬಲಿಕ್ಕೆ ಇಲ್ಲಿ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳಿದ್ದಾರೆ ಅದಕ್ಕಾಗಿಯೇ ಈಗ ನಾವು ತಿದ್ದುಪಡಿಯನ್ನು ತರುತ್ತಿದ್ದೇವೆ. 50 ಪರ್ಸೆಂಟ್ ಎಸ್‌ಸಿ/ಎಸ್‌ಟಿಗೆ ಕೊಡಬೇಕಿನ್ನತಕ್ಕಂಥದ್ದು ಅದನ್ನು ತೆಗೆದು 75 ಪರ್ಸೆಂಟ್ ಕೊಡೋಣವೆನ್ನತಕ್ಕಂಥ ತಿದ್ದುಪಡಿ ಭೂಸುಧಾರಣ ಕಾಯಿದೆಗೆ ತರುತ್ತಿದ್ದೇವೆ. ಅದರ ಪ್ರಕಾರ ಇನ್ನು 25 ಪರ್ಸೆಂಟ್ ಹೆಚ್ಚು ಜಮೀನು ಸಿಗುತ್ತದೆ.

ಶ್ರೀ ಕೆ. ಸಿದ್ದಯ್ಯ:- ಸ್ವಾಮಿ ತಿದ್ದುಪಡಿಯನ್ನು ತರುತ್ತಿರುವುದಕ್ಕೆ ಬಹಳ ಸಂತೋಷ. ಅದರೂ ಸಹ ಇಲ್ಲಿ ಆಗಿರತಕ್ಕಂಥ ಡಿಫಿಶಿಯೆನ್ಸಿ ಎಷ್ಟು ಆಗಿದೆ ಅಷ್ಟನ್ನಾದರೂ ಲ್ಯಾಂಡ್ ರಿಫಾರ್ಮ್ಸ್‌ಗೆ ಬರುತ್ತದಲ್ಲ, ಅದನ್ನು ಕೊಡುವುದಕ್ಕೆ ಸೂಕ್ತ ತಿದ್ದುಪಡಿ ತರುತ್ತೀರಾ ಸ್ವಾಮಿ? ಒಂದು ವೇಳೆ 75 ಪರ್ಸೆಂಟ್ ಇರಬಹುದು. ಜಾಸ್ತಿ ಕೊಡಿ ಎಷ್ಟು ಕಡಿಮೆಯಾಗಿದೆ ಅಷ್ಟನ್ನಾದರೂ ಕೊಡಿ ಎಂದು ನಾವು ಕೇಳಿದ್ದೇವೆ. ತಾವು 75 ಪರ್ಸೆಂಟ್ ಅಂದ ಮಾತ್ರಕ್ಕೆ ಏನೂ ಪ್ರಯೋಜನವಾಗುವುದಿಲ್ಲ, ಇನ್ನೂ ಡಿಫಿಶಿಯನ್ಸಿಯಾದರೆ ನಾವು ಕೇಳತಕ್ಕಂಥದ್ದು ಅದಕ್ಕೆ ಸರಿಯಾದ ತಿದ್ದುಪಡಿತಂದು ಅದರಲ್ಲಿ ಎಷ್ಟು ಕಡಿಮೆ ಇರುತ್ತದೆ ಅದನ್ನು ಸರಿಮಾಡುವುದಕ್ಕೆ ಸರ್ಪಲಸ್ ಲ್ಯಾಂಡ್ ಇರುತ್ತದೆ ಅದನ್ನು ಅವರಿಗೆ ಕೊಡುತ್ತೀರಾ, ಅದಕ್ಕೆ ತಿದ್ದುಪಡಿ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರಲ್ಲಿ ಕೊಡಬೇಕೆನ್ನುವ ದೃಷ್ಟಿಯಿಂದಲೇ ನಾನು ಹೇಳಿದ ಭೂ ಸುಧಾರಣ ಕಾನೂನಿನಿಂದಲೇ ತಿದ್ದುಪಡಿ ತಂದು 50 ಪರ್ಸೆಂಟ್ ಇದ್ದುದನ್ನು 75 ಪರ್ಸೆಂಟ್ ಮಾಡಿದ್ದೇವೆ. ಇಷ್ಟು

ಕೊಟ್ಟಮೇಲೂ ಕಡಿಮೆ ಬೀಳುತ್ತದೆಂದರೆ ಏನು ಮಾಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಜಮೀನು ಅಷ್ಟೇ ಇರುತ್ತದೆ. ಎಷ್ಟಿರುತ್ತದೋ ಅಷ್ಟೇ ಇರುತ್ತದೆ.

ಶ್ರೀ ಕೆ. ಸಿದ್ದಯ್ಯ :- ಎಕ್ಸೆಸ್ ಲ್ಯಾಂಡ್ ಇದ್ದರೆ ಕೊಡಿ, ಇಲ್ಲದಿದ್ದರೆ ಬಿಡಿ.

ಅಧ್ಯಕ್ಷರು :- ಜಮೀನು ಜಾಸ್ತಿ ಮಾಡಿ ಎಂದು ಕೇಳಿ. ಜಾಸ್ತಿ ಮಾಡದಿದ್ದರೆ ಬಡ್ಡೆಟ್ಟಿನಲ್ಲಿ ಪ್ರೊವೈಡ್ ಮಾಡಿ ಎಷ್ಟು ಬೇಕೋ ಅಷ್ಟು ಅಕ್ಟೈರ್ ಮಾಡಿಕೊಡಿ ಎಂದು ಕೇಳಿ ಸರ್ಕಾರದವರು ಇದನ್ನು ಪರಿಶೀಲಿಸಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಲ್ಯಾಂಡ್ ಗ್ರಾಂಟ್ಸ್ ರೂಲ್ಸ್‌ನಲ್ಲಿ 50 ಪರ್ಸೆಂಟ್ ಕೊಡಬೇಕೆಂದಿದ್ದುದನ್ನು 60 ಪರ್ಸೆಂಟ್ ಕೊಡಬೇಕೆಂದು ತಿದ್ದುಪಡಿ ಮಾಡಿದ್ದೇವೆ. ಭೂಸುಧಾರಣಾ ಕಾನೂನಿನಲ್ಲಿ ಕೂಡಾ ತಿದ್ದುಪಡಿ ಮಾಡಿದ್ದೇವೆ. 50 ಪರ್ಸೆಂಟ್ ಇದ್ದುದನ್ನು 70 ಪರ್ಸೆಂಟ್ ಮಾಡಿದ್ದೇವೆ. ಸಪ್ಲಸ್ ಲ್ಯಾಂಡ್‌ನ್ನು ಡಿಸ್ಟ್ರಿಬ್ಯೂಷನ್ ಮಾಡುವಾಗ ಎಸ್.ಸಿ./ಎಸ್.ಟಿ. ಯವರಿಗೆ ಕೊಡಬೇಕೆಂದು ಮಾಡಿದ್ದೇವೆ. ಇನ್ನೊಂದು ಎಸ್.ಸಿ/ಎಸ್.ಟಿ ಕಾರ್ಪೋರೇಷನ್ನವರು ಜಮೀನು ಪರ್ಚೇಸ್ ಮಾಡಿಕೊಂಡು ಎಸ್.ಸಿ/ಎಸ್.ಟಿ ಯವರಿಗೆ ಕೊಡುತ್ತಿದ್ದಾರೆ. ಆದರಲ್ಲಿ ಸಾಕಷ್ಟು ಜನರಿಗೆ ಸಿಗುತ್ತಿದೆ. ಈ ಕಾನೂನಿನ ಅಡಿಯಲ್ಲಿ ಎಷ್ಟು ಸಾಧ್ಯವಿದೆ ಅದನ್ನು ಸಹ ಕೊಡತಕ್ಕ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಕೆ. ಸಿದಯ್ಯ:- ನಾನು ಆ ಕಾನೂನಿನ ಅಡಿಯಲ್ಲಿ ಕೇಳುವುದಿಲ್ಲ. ಇರುವ ಲ್ಯಾಂಡ್ ಕೊಡಿ, ಪರ್ಚೇಸ್ ಆದರೂ ಮಾಡಿಕೊಡಿ. ನೀವು ತಿದ್ದುಪಡಿ ಮಾಡಿದ್ದುದು ಉಂಟೋ ಇಲ್ಲವೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಯಾವ ಕಾನೂನಿಗೆ ತಿದ್ದುಪಡಿ ತನ್ನಿ ಎಂದರೆ ತರುತ್ತೇವೆ.

ಅಧ್ಯಕ್ಷರು:- ನೀವು ಹೇಳಿದ ಹಾಗೆ ಮಾಡುತ್ತಾರೆ, ಯಾವಾಗಲಾದರೂ ಅವರ ಹತ್ತಿರ ಹೋಗಿ.

ಭೂ ಸುಧಾರಣಾ ಕಾಯಿದೆ ಅಡಿಯಲ್ಲಿ ಸಾಲ ಮನ್ನಾ.

144 (1177) ಶ್ರೀ ಕೆ. ಗಂಗಾಧರ ಗೌಡ (ಬೆಳ್ತಂಗಡಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭೂ ಸುಧಾರಣಾ ಕಾಯಿದೆ ಅಡಿಯಲ್ಲಿ ರೈತರು ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದ ಸಾಲದ ಪರಿಹಾರ ಧನ ರದ್ದು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ರೈತರಿಗೆ ಹಾಗೂ ಸಹಕಾರಿ ಸಂಘಗಳಿಗೆ ಸ್ಪಷ್ಟ ನಿಲುವನ್ನು ನಿರೀಕ್ಷಿಸಬಹುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಭೂ ಸುಧಾರಣಾ ಕಾಯಿದೆ 1961 ಕಲಂ 53ಕ್ಕೆ ತಿದ್ದುಪಡಿತಂದು ಈಗಾಗಲೇ ಪ್ರೀಮಿಯಂ ರದ್ದು ಮಾಡಲಾಗಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಗಂಗಾಧರ ಗೌಡ:- ಭೂ ಸುಧಾರಣಾ ಕಾಯಿದೆ ಅಡಿಯಲ್ಲಿ ರೈತರು ಭೂ ಅಭಿವೃದ್ಧಿ ಬ್ಯಾಂಕಿನಿಂದ ಪಡೆದ ಸಾಲದ ಪರಿಹಾರ ಧನ ರದ್ದು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ಎಂದು ಕೇಳಿದ್ದೇನೆ, ಅದಕ್ಕೆ ಮಂತ್ರಿಗಳು ಭೂ ಸುಧಾರಣಾ ಕಾಯಿದೆ 1961 ಕಲಂ 53ಕ್ಕೆ ತಿದ್ದುಪಡಿ ತಂದು ಈಗಾಗಲೇ ಪ್ರೀಮಿಯಂ ರದ್ದು ಮಾಡಲಾಗಿದೆ ಎಂದು ಉತ್ತರಿಸಿದ್ದಾರೆ. ಆದರೆ ವಾಸ್ತವವಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ರೈತರಿಂದ ಪ್ರೀಮಿಯಂ ವಸೂಲ್ಮಾಡುತ್ತಿದ್ದಾರೆ. ತಾವು ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಸೂಲ್ಮಾಡಬಾರದೆಂದು ನಾವು ಹೇಳಿದ್ದೇವೆ. ಈಗ ಇನ್ನೊಂದು ಸರ್ಕ್ಯುಲರ್ ಕಳುಹಿಸುತ್ತೇವೆ. 3ಕೋಟಿ ರೂಪಾಯಿಗಳನ್ನು ಪಿಎಲ್‌ಡಿ ಬ್ಯಾಂಕಿನವರಿಗೆ ಸರ್ಕಾರ ಕೊಡತಕ್ಕದ್ದು ಇದೆ. ಬ್ಯಾಂಕಿನವರು